ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ

OS ನಂಬರ. 23/2023

ಪಿ ಡಬ್ಲ್ಯೂ– 2

ದಿಃ 23–10–2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರುಃ | ರಾಜೇಶ ನಾಯಕ |
| ತಂದೆಯ ಹೆಸರುಃ | ಈರಾ |
| ವಯಸ್ಸುಃ | 50 ವರ್ಷ |
| ಉದ್ಯೋಗಃ | ಪಂಚಾಯತಿ ಸದಸ್ಯರು |
| ವಿಳಾಸಃ | ಅವರ್ಸಾ |

ಮುಖ್ಯ ವಿಚಾರಣೆ: ವಾದಿ ಪರ ವಕೀಲರಾದ ಶ್ರೀ ವಿ.ಎಸ್.ಎನ್ ಇವರಿಂದಃ

ವಾದಿಯು ಲಕ್ಷ್ಮೀನಾರಾಯಣವಾಡಾದಲ್ಲಿ ಸುಮಾರು 19–20 ವರ್ಷಗಳಿಂದ ವಾಸ ಮಾಡುತ್ತಿದ್ದಾರೆ. ನಿಪಿ–2 ಅವರ್ಸಾ ಗ್ರಾಮ ಪಂಚಾಯತಿಯಿಂದ ನೀಡಿದ ಪ್ರಮಾಣಪತ್ರವಾಗಿರುತ್ತದೆ. ಅದರಲ್ಲಿರುವ ತಮ್ಮ ಸಹಿಯನ್ನು ಸಾಕ್ಷಿಯು ಗುರುತಿಸಿದ್ದು, ಸಹಿಯನ್ನು ನಿಪಿ–2ಎ ಎಂದು ಗುರುತಿಸಲಾಯಿತು. ವಾದಿಯು ವಾಸ ಮಾಡುತ್ತಿರುವ ಮನೆಯ ಸಂಖ್ಯೆ195 ಆಗಿರುತ್ತದೆ.

ಪಾಟೀ ಸವಾಲುಃ ಪ್ರತಿವಾದಿಯರ ಪರ ವಕೀಲರಾದ ಶ್ರೀ ಎಂ.ಪಿ.ಬಿ ಇವರಿಂದಃ

2. ಅವರ್ಸಾ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಒಟ್ಟು ಎಷ್ಟು ಮನೆಗಳು ಇರುತ್ತವೆ ಎಂದರೆ ಸಾಕ್ಷಿಯ ನಿಖರವಾಗಿ ಹೇಳಲು ಬರುವುದಿಲ್ಲ, 400-500 ಮನೆಗಳು ಇರಬಹುದು ಎಂದು ನುಡಿಯುತ್ತಾರೆ. ಅವರ್ಸಾ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಸಾಕ್ಷಿದಾರರಾದ ನಾರಾಯಣ, ಶ್ರೀಧರ ಹಾಗೂ ಸವಿತಾ ಇವರ ಮನೆಗಳ ಸಂಖ್ಯೆ ಎಷ್ಟು ಎಂದರೆ ಗೊತ್ತಿರುವುದಿಲ್ಲ. ಲಕ್ಷ್ಮೀನಾರಾಯಣವಾಡಾದಲ್ಲಿ ಎಷ್ಟು ವಾಡೆಗಳು ಇರುತ್ತವೆ ಎಂದರೆ ಸಾಕ್ಷಿಯು 2 ವಾಡೆಗಳು ಇರುತ್ತವೆ ಎಂದು ನುಡಿಯುತ್ತಾರೆ. ವಾದಿ ಹಾಗೂ ಅವರ ಮಕ್ಕಳನ್ನು ಎಷ್ಟು ವರ್ಷಗಳಿಂದ ಗುರುತಿಸುತ್ತೀರಿ ಎಂದರೆ ಸಾಕ್ಷಿಯು 20 ವರ್ಷಗಳಿಂದ ಗುರುತಿಸುತ್ತೇನೆ ಎಂದು ನುಡಿಯುತ್ತಾರೆ. ಅವರ್ಸಾ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಯಾರು ಯಾರು ಬಾಡಿಗೆ ಆಧಾರದ ಮೇಲೆ ಹಾಗೂ ಮಾಲೀಕತ್ವದ ಆಧಾರದ ಮೇರಗೆ ಅಥವಾ ಪರವರನಿಗೆ ಮೇರೆಗೆ ಇರುತ್ತಾರೆ ಎಂದು ಗೊತ್ತಾ ಎಂದರೆ ಸಾಕ್ಷಿಯು ಅವರನ್ನು ನೋಡಿದರೆ ಗುರುತುಪಡಿಸುತ್ತೇನೆ ಎಂದು ನುಡಿಯುತ್ತಾರೆ. ಮನೆ ನಂ.195 ರ ಮಾಲೀಕರು ಯಾರು ಎಂದರೆ ಸಾಕ್ಷಿಯು ನನ್ನ ಪ್ರಕಾರ ಸುರೇಶ ಸದಾನಂದ ನಾಯಕ ಎಂದು ನುಡಿಯುತ್ತಾರೆ. 2ನೇ ಪ್ರತಿವಾದಿಯನ್ನು ನೋಡಿದರೆ ಗುರುತಿಸುತ್ತೇನೆ. 2ನೇ ಪ್ರತಿವಾದಿಯು ವಾದಿಗೆ ಏನು ಆಗಬೇಕು ಎಂದರೆ ಸಾಕ್ಷಿಯು ಗಂಡನ ಸಹೋದರ ಎಂದು ನುಡಿಯುತ್ತಾರೆ. ನಿಮ್ಮ ಪಂಚಾಯತಿ ದಾಖಲೆಯ ಪ್ರಕಾರ ಮನೆ ನಂ.195 2ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ವಾದಿಯ ಗಂಡ ತೀರಿಕೊಂಡ ನಂತರ ಪ್ರತಿವಾದಿಯರು ವಾದಿಗೆ ಪರವಾನಿಗೆ ಮೇರೆಗೆ ವಾಸ

ಮಾಡಲು ಸದರಿ ಮನೆಯನ್ನು ಕೊಟ್ಟಿರುತ್ತಾರೆ ಎಂದರೆ ಗೊತ್ತಿರುವುದಿಲ್ಲ. ವಾದಿಯ ಹೆಸರಿಗೆ ಸುಂಕಸಾಳ ಗ್ರಾಮ ಪಂಚಾಯತಿಯಲ್ಲಿ ಮನೆ ಇರುತ್ತದೆ ಎಂದರೆ ಗೊತ್ತಿರುವುದಿಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

ಹೆಚ್ಚುವರಿ ಜೆ.ಎಂ.ಎಫ್.ಸಿ., ಅಂಕೋಲಾ.